ಮರಗಳ ನಿರ್ವಹಣೆ

1205(898); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

ಅ) ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿಯ 8 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಅರಣ್ಯ ಶಾಖೆಗೆ ಒಣಗಿರುವ ಮರ/ ಶಿಥಿಲಗೊಂಡಿರುವ ಮರ/ ಅಡ್ಡಾದಿಡ್ಡಿಯಾಗಿ ಬೆಳೆದು ಅಪಾಯವನ್ನಂಟು ಮಾಡುವಂತಹ ಮರಗಳು ಇನ್ನಿತ್ಯಾದಿ ಸಾರ್ವಜನಿಕರುಗಳಿಗೆ ತೊಂದರೆಯಾಗುತ್ತಿರುವಂತಹ ಮರಗಳನ್ನು ತೆರವುಗೊಳಿಸುವಂತೆ/ಟ್ರಿಮಿಂಗ್ ಮಾಡುವಂತೆ ಕಳೆದ 1 ವರ್ಷದಿಂದ ಬಂದಿರುವ ಪ್ರಕರಣಗಳೆಷ್ಟು;

ಆ) ಸದರಿ ಪ್ರಕರಣಗಳಲ್ಲಿ ತೆರವುಗೊಳಿಸಿರುವ ಟ್ರಿಮಿಂಗ್ ಮಾಡಿರುವ ಮರಗಳೆಷ್ಟು; ಉಳಿಕೆಯಿರುವ ಪ್ರಕರಣಗಳೆಷ್ಟು;

ಇ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮರಗಳ ನಿರ್ವಹಣೆ, ಮರ ಕಡಿಯಲು/ಟ್ರಿಮ್ ಮಾಡುವ ಸಂಬಂಧವಾಗಿ ಇರುವಂತಹ ಅಧಿಕಾರಿಗಳೆಷ್ಟು/ಸದರಿ ಕಾರ್ಯ ನಿರ್ವಹಿಸಲಿರುವ ಅಧಿಕಾರಿಗಳ ಕೊರತೆಯಿರುವ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೆ; ಅಗತ್ಯವಿರುವ ಅಧಿಕಾರಿಗಳು/ನೌಕರರುಗಳನ್ನು ನಿಯೋಜಿಸಲು ಸರ್ಕಾರ ತೆಗೆದು ಕೊಂಡಿರುವ ಕ್ರಮವೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಹೆಬ್ಬಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 8 ವಾರ್ಡ್‌ಗಳ ವ್ಯಾಪ್ತಿಯಿಂದ ಅರಣ್ಯ ಇಲಾಖೆಗೆ ಒಣಗಿದ, ಅಪಾಯ ಸ್ಥಿತಿಯ, ಶಿಥಿಲಾವಸ್ಥೆಯಲ್ಲಿರುವ ಮರಗಳನ್ನು/ರೆಂಬೆಗಳನ್ನು ತೆರವುಗೊಳಿಸುವ ಸಂಬಂಧ ಕಳೆದ ಒಂದು ವರ್ಷದ ಅವಧಿಯಲ್ಲಿ 118 ಪ್ರಕರಣಗಳು ಬಂದಿರುತ್ತವೆ.

ಆ) ಸದರಿ ಪ್ರಕರಣಗಳಲ್ಲಿ ತೆರವುಗೊಳಿಸಿರುವ/ಟ್ರಿಮ್ಮಿಂಗ್ ಮಾಡಿರುವ ಮರಗಳು, ಉಳಿಕೆಯಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಒಟ್ಟು ಪ್ರಕರಣಗಳ ಸಂಖ್ಯೆ	ತೆರವುಗೊಳಿಸಿರುವ/ ಟ್ರಿಮ್ಮಿಂಗ್ ಮಾಡಿರುವ ಪ್ರಕರಣಗಳು	ಉಳಿಕೆಯಿರುವ ಪ್ರಕರಣಗಳು	ಷರಾ
118	72	46	ಉಳಿಕೆಯಿರುವ 46 ಪ್ರಕರಣಗಳಲ್ಲಿ ಮರಗಳು/ರೆಂಬೆಗಳು ಆರೋಗ್ಯಕರವಾಗಿದ್ದು, ಸಾರ್ವಜನಿಕರಿಗೆ ಹೆಚ್ಚಿನ ತೊಂದರೆಗಳು ಇಲ್ಲದ ಕಾರಣ ಸದರಿ ಮರಗಳು/ರೆಂಬೆಗಳನ್ನು ತೆರವು/ ಟ್ರಿಮ್ ಮಾಡಿರುವುದಿಲ್ಲ.

ಇ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮರಗಳ ನಿರ್ವಹಣೆ/ಮರ ಕಡಿಯಲು/ಟ್ರಿಮ್ ಮಾಡುವ ಸಂಬಂಧವಾಗಿ ಇರುವಂತಹ ಅಧಿಕಾರಿಗಳ ವಿವರ ಕೆಳಕಂಡಂತಿದೆ.

1. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು – 01
2. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು – 02
3. ಉಪ ವಲಯ ಅರಣ್ಯಾಧಿಕಾರಿಗಳು – 08

ಅರಣ್ಯ ಘಟಕದ ವ್ಯಾಪ್ತಿಯಲ್ಲಿರುವ 8 ವಲಯಗಳಲ್ಲಿ ಸಾರ್ವಜನಿಕರಿಂದ ಬರುವಂತಹ ದೂರುಗಳ ಮೇರೆಗೆ ಮರಗಳು/ ರೆಂಬೆಗಳನ್ನು ತೆರವುಗೊಳಿಸಲು, ಆಕಸ್ಮಿಕವಾಗಿ ಗಾಳಿ ಮಳೆಗೆ

ಬೀಳುವಂತಹ ಮರಗಳು/ರೆಂಬೆಗಳನ್ನು ತೆರವುಗೊಳಿಸಲು ಹಾಗೂ ಇನ್ನಿತರೆ ಅರಣ್ಯೀಕರಣ ಕಾಮಗಾರಿಗಳನ್ನು ಮೇಲ್ಕಂಡ ಸಿಬ್ಬಂದಿಗಳಿಂದ ನಿರ್ವಹಿಸಲು ಕಷ್ಟಸಾಧ್ಯವಾಗಿರುತ್ತದೆ.

ಆದುದರಿಂದ, ಈ ಕೆಳಕಂಡಂತೆ ಹೆಚ್ಚುವರಿ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವ ಬಗ್ಗೆ ಕ್ರಮವಹಿಸಲಾಗುತ್ತಿರುತ್ತದೆ.

ವಲಯ	ವಲಯ ಅರಣ್ಯಾಧಿಕಾರಿ	ಉಪ ವಲಯ ಅರಣ್ಯಾಧಿಕಾರಿ	ಅರಣ್ಯ ರಕ್ಷಕ
ಪೂರ್ವ	1	2	2
ಯಲಹಂಕ	1	–	1
ದಾಸರಹಳ್ಳಿ	1	–	1
ಮಹದೇವಪುರ	1	–	1
ಪಶ್ಚಿಮ	1	2	4
ದಕ್ಷಿಣ	1	2	4
ರಾ.ರಾ. ನಗರ	1	–	1
ಬೊಮ್ಮನಹಳ್ಳಿ	1	–	1
ಒಟ್ಟು	**8**	**6**	**15**